# ಅರೆರೆ ಅನಾರ್ಕಲಿ!

**ಸಲ್ವಾರ್ ಉಡುಪುಗಳಲ್ಲಿ ಇದೀಗ ಅನಾರ್ಕಲಿಯದ್ದೇ ಕಾರುಬಾರು. ಬಣ್ಣಗಳ ಓಕುಳಿಯಲ್ಲಿ ಮಿಂದೆದ್ದು ಶ್ರೀಮಂತವಾಗಿರುವ ಅನಾರ್ಕಲಿ ವಸ್ತ್ರ, ಪ್ರಕೃತಿಯ ಶ್ರೀಮಂತಿಕೆಯಿಂದ ಸ್ಫೂರ್ತಿ ಪಡೆದು ಅವತರಿಸಿದೆ. ಕಾಲಕ್ಕೆ ಅನುಗುಣವಾಗಿ ವಸ್ತ್ರವಿನ್ಯಾಸಕರ ಕೈಚಳಕದಿಂದ ನವೀನ ಸ್ವರೂಪ ಪಡೆದಿರುವ ಇದು, ಎಲ್ಲಾ ವಯೋಮಾನದವರ ಮೆಚ್ಚುಗೆ ಗಳಿಸಿದೆ.**

**■ ವಿದ್ಯಾಶ್ರೀ ಎಸ್.**



ಚಿತ್ರ: ಎಸ್.ಕೆ. ದಿನೇಶ್

ಮೈತುಂಬಾ ವಿನ್ಯಾಸ ಹೊದ್ದು, ಬಣ್ಣಗಳ ಓಕುಳಿಯಲ್ಲಿ ಮಿಂದೆದ್ದು ಶ್ರೀಮಂತವಾದದ್ದು ಅನಾರ್ಕಲಿ ವಸ್ತ್ರ. ಪ್ರಕೃತಿಯ ಶ್ರೀಮಂತಿಕೆಯಿಂದ ಸ್ಫೂರ್ತಿ ಪಡೆದು ಅವತಿಸಿರುವ ಈ ಉಡುಪು ರಾಜ ಮಹಾರಾಜರ ಕಾಲದಿಂದಲೂ ಸುಭದ್ರ ಸ್ಥಾನ ಗಳಿಸಿಕೊಂಡಿದೆ.

ಅಡಿಯಿಂದ ಮುಡಿವರೆಗೂ ಇರುವ ಅನಾರ್ಕಲಿ ಉಡುಪು ಯುವತಿಯರ ಸೌಂದರ್ಯಕ್ಕೆ ಮೆರುಗು ನೀಡುವುದರಲ್ಲಿ ಸಂಶಯವೇ ಇಲ್ಲ. ಸಾಂಪ್ರದಾಯಿಕ ಉಡುಪಾದರೂ, ಬೆರಗು ಮೂಡಿಸುವಂತೆ ಕಾಲಕ್ಕೆ ತಕ್ಕಂತೆ ಬದಲಾವಣೆಗೆ ಒಗ್ಗಿಸಿಕೊಂಡಿದೆ.

ಮೊಘಲರ ಕಾಲದ ಈ ಉಡುಪಿನ ಮೂಲ ಪಾಕಿಸ್ತಾನ. ವಸ್ತ್ರ ವಿನ್ಯಾಸಕರ ಕೈಚಳಕದಿಂದಾಗಿ ಅನಾರ್ಕಲಿ ದೇಸಿತನಕ್ಕೂ ಒಗ್ಗಿಸಿಕೊಂಡು, ಈಗ ಇನ್ನಷ್ಟು ಸ್ಟೈಲಿಶ್ ಆಗಿವೆ. ಕಾಟನ್, ಸಿಲ್ಕ್, ಬ್ರೈಡಲ್, ಪಾರ್ಟಿವೇರ್, ಸಾಂಪ್ರದಾಯಿಕ, ಡಿಸೈನರ್, ಸರಳ, ಪಾಕಿಸ್ತಾನಿ... ಹೀಗೆ ಇದರಲ್ಲಿ ಹಲವು ಬಗೆಗಳಿವೆ. ಅನಾರ್ಕಲಿ ಉಡುಪು ಸಾಂಪ್ರದಾಯಿಕ ನೋಟ ನೀಡುವುದರ ಜೊತೆಗೆ ಆಧುನಿಕ ಮೆರುಗನ್ನು ಮೇಳೈಸಿಕೊಂಡಿದೆ.

ಸೊಂಟದವರೆಗೂ ಬಿಗಿದ್ದಪ್ಪಿ, ನಡುವಿನಿಂದ ಕೆಳಗೆ ನೆರಿಗೆಗಳಿಂದ ಸುತ್ತುವರೆದಂತೆ ಕಾಣುವುದು ಈ ಶೈಲಿಯ ಉಡುಪಿನ ವೈಶಿಷ್ಟ್ಯ. ಮದುವೆ ಸಮಾರಂಭಗಳಲ್ಲಿ ವಧುವನ್ನು ಶೃಂಗಾರಗೊಳಿಸುವುದರಿಂದ ಹಿಡಿದು ಗರ್ಭಿಣಿ, ಬಾಣಂತಿಯರಿಗೆ ಹೊಂದಿಕೆಯಾಗುವಂತಹ ಅನಾರ್ಕಲಿಗಳು ಮಾರುಕಟ್ಟೆಯಲ್ಲಿವೆ.

‘ಅನಾರ್ಕಲಿ’ ಸಿನಿ ನಟಿಯರ ಮೆಚ್ಚುಗೆ ಗಳಿಸಿ, ದೇಸಿ ಮನಸುಗಳನ್ನು ಅಪ್ಪಿಕೊಂಡಿದೆ. ಅದ್ದೂರಿ ಕಾರ್ಯಕ್ರಮಗಳಲ್ಲಿ ಹಲವು ನಟಿಯರು ಇದೇ ಬಗೆಯ ಉಡುಪನ್ನು ಧರಿಸಿ ಮಿಂಚು ಹರಿಸಿದ್ದಾರೆ. ಇದರಲ್ಲಿ ಕೋಲ್ಡ್, ಕೂಲ್ ಶೋಲ್ಡರ್ ಆಯ್ಕೆಗಳೂ ಇವೆ.

ಅದ್ದೂರಿಕೈ ಕುಸುರಿಯುಳ್ಳ ಉಡುಪು ಸಮಾರಂಭಗಳಿಗೆ ಮೀಸಲಾದರೆ, ಕಾಟನ್ ಫ್ಯಾಬ್ರಿಕ್‌ಗಳಿಂದ ತಯಾರಿಸಲ್ಪಟ್ಟ ಆರಾಮದಾಯವೆನ್ನಿಸುವ ನಿತ್ಯದ ಬಳಕೆಯ ಉಡುಪು ಬಹುಯುವತಿಯರ ಪ್ರೀತಿಗೆ ಪಾತ್ರವಾಗಿದೆ.

ಅನಾರ್ಕಲಿ ಉಡುಪಿಗೆ ಹೊಂದಿಕೆಯಾಗುವಂತಹ ಬನಾರಸಿ, ಕಾಂಜೀವರಂ ದುಪ್ಪಟ್ಟಾ ಈಗ ಹೆಚ್ಚು ಪ್ರಚಲಿತದಲ್ಲಿರುವ ಫ್ಯಾಷನ್. ಕೆಲವು ಅನಾರ್ಕಲಿ ಉಡುಪು ಪಾದವನ್ನು ಮುಚುವಂತಿದ್ದರೆ, ಇನ್ನು ಕೆಲವು ಪಾದದಿಂದ ಒಂದೆರಡು ಇಂಚು ಮೇಲಿರುತ್ತದೆ. ಇದಕ್ಕೆ ಪಲಾಜೊ ಪ್ಯಾಂಟ್ ಧರಿಸಬಹುದು.